ಶಿವಮೊಗ್ಗ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ನಿಗಮದಿಂದ ಹಮ್ಮಿಕೊಳ್ಳಲಾಗಿರುವ ಯೋಜನೆಗಳು

3640(4126) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2001 ರಿಂದ ಈವರೆಗೂ ವಿವಿಧ ಯೋಜನೆಯಡಿಯಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಕೈಗೊಳ್ಳಲಾದ ಯೋಜನೆಗಳು ಯಾವುವು; ಯೋಜನೆ ವೆಚ್ಚ ಎಷ್ಟು; (ವಿವರ ನೀಡುವುದು);

ಆ) ವಕ್ಫ್ ಮಂಡಳಿ ವತಿಯಿಂದ 2001 ರಿಂದ ಈವರೆಗೆ ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಸೀದಿಗಳ ಅಭಿವೃದ್ಧಿಗಾಗಿ ಖರ್ಚು ಮಾಡಲಾದ ಹಣವೆಷ್ಟು; (ವಿವರ ನೀಡುವುದು); 2003–04ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವತಿಯಿಂದ ವಕ್ಫ್ ಮಂಡಳಿಗೆ ಪ್ರಸ್ತಾಪಿಸಲಾಗಿರುವ ಯೋಜನೆಗಳು ಯಾವುವು ಹಾಗೂ ಮಂಡಳಿ ವತಿಯಿಂದ ಮೀಸಲಾಗಿಸಿರುವ ಹಣವೆಷ್ಟು?

ಶ್ರೀ ಎಂ. ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಶಿವಮೊಗ್ಗ ಜಿಲ್ಲೆಯ ವಿಧಾನ ಸಭೆಯ ಎಲ್ಲಾ ಕ್ಷೇತ್ರಗಳಲ್ಲಿ ಈ ಕೆಳಕಂಡ ಯೋಜನೆಗಳನ್ನು ಅಳವಡಿಸಲಾಗುತ್ತದೆ.

(ರೂ. ಲಕ್ಷಗಳಲ್ಲಿ)

ಯೋಜನೆ ಹೆಸರು	2001–02		2002–03		2003–04	
	ಫ.ಸಂಖ್ಯೆ	ಆರ್ಥಿಕ	ಪ.ಸಂಖ್ಯೆ	ಆರ್ಥಿಕ	ಪ.ಸಂಖ್ಯೆ	ಆರ್ಥಿಕ
1	2	3	4	5	6	7
1) ಸ್ವಾವಲಂಬನ ಸಾಲದ ಯೋಜನೆ	62	2.88	123	3.16	37	3.56
2) ಸಹಾಯಧನ	62	3.10	123	6.15	37	1.85
3) ತರಬೇತಿ ಯೋಜನೆ	36	0.67	40	1.02	–	–
4) ಗಂಗಾ ಕಲ್ಯಾಣ ಯೋಜನೆ	02	1.30	02	1.30	–	–
5) ರಾಷ್ಟ್ರೀಯ ಯೋಜನೆ	34	4.32	20	10.33	–	–

ಆ) 2001–02 ಮತ್ತು 2002–03ನೇ ಸಾಲಿನಲ್ಲಿ ಶಿವಮೊಗ್ಗ ಕ್ಷೇತ್ರದ ಮಸೀದಿ ಅಭಿವೃದ್ಧಿಗಾಗಿ ಮಂಜೂರು ಮಾಡಲಾದ ಅನುದಾನದ ಮೊತ್ತ ಕೆಳಕಂಡಂತಿದೆ.

ವರ್ಷ	ಮಸೀದಿಗಳ ಸಂಖ್ಯೆ	ಮೊತ್ತ
2001–2002	10	ರೂ. 370000.00
2002–200	16	ರೂ. 365000.00

ಅನುಬಂಧಗಳಲ್ಲಿ ಲಗತ್ತಿಸಲಾಗಿದೆ.

2003–04ನೇ ವರ್ಷಕ್ಕೆ ಸರ್ಕಾರವು ಅನುದಾನವನ್ನು ಇದುವರೆಗೂ ಮಂಜೂರು ಮಾಡಿರುವುದಿಲ್ಲ.

ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಹಮ್ಮಿಕೊಳ್ಳಲಾದ ಯೋಜನೆಗಳು

3641(4127) ಶ್ರೀ. ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?